ಜಮೀನಿನ ಪಕ್ಕಕ್ಕೆ ನಾಲುವೆ ಬಂತು. ನಾಲುವೆಯಲ್ಲಿ ಸದಾನೀರು. ತಗೊಳ್ಳಿ ಬಂಪರ್ ಕ್ರಾಪ್.

ನೀರು ಕೊಟ್ಟವರು ನೂರು ಕಾಲ ಬದುಕಲಿ ಎಂದು ಅಜ್ಜ ನೂರು ಬಾರಿ ಹೇಳುತ್ತಿದ್ದರಂತೆ. ಆ ವರ್ಷವೇ ಅಪ್ಪನಿಗೆ ಮದುವೆ. ಪಕ್ಕದ ಪಾಂಡವಪುರದಿಂದ ಹುಡುಗಿ ತಂದ್ರು. ಆ ಕಾಲದಲ್ಲೇ ಸ್ಕೂಟರ್ ಕೊಟ್ಟಿದ್ದರಂತೆ. ಎರಡು ದಿನಗಳ ಬೀಗರ ಬಾಡೂಟ.

ಮದುವೆ ಮುಗಿದು ಇನ್ನೇನು ತಿಂಗಳೂ ಆಗಿರಲಿಲ್ಲ. ಅಜ್ಜ ಸತ್ತು ಹೋದ. ಮದುವೆಯಾದ ಹುರುಪು, ನೀರು ಬಂದ ಹುರುಪು, ಉತ್ಪನ್ನ ಹೇರಳವಾಗಿ ಮನೆಗೆ ಲಕ್ಷ್ಮಿ ಪ್ರವೇಶ ಮಾಡಿದಳು. ಥಕಥೈ ಥಕಥೈ ಅಂತ.

ಮರು ವರ್ಷ ನಾನು ಹುಟ್ಟಿದ್ದು.

★★★

ಏನಂತೀರಿ, ದೇವರು ಕೊಡಬೇಕು ಎಂದರೆ ಕುಂಡೆ ಮೇಲೆ ಹೊಡೆದು ಕೊಡ್ತಾನಂತೆ. ನಂತರ ಕೆಲವು ವರ್ಷ ಕಳೆದಾದ ಮೇಲೆ ಸರ್ಕಾರ ಆದೇಶ ಹೊರಡಿಸಿತು. ಉಳುವವನಿಗೆ ಭೂಮಿ. ಅವನೇ ಹೊಲದೊಡೆಯ. ಆಹಾ! ಇಡೀ ಭೂಮಿ, ಗೌಡರ ಹೊಲ ನಮ್ಮ ಪಾಲಿಗೆ ಬಂತು.

ಕಾಲ ಹೊರಳಿತ್ತು.

ಗಾಳಿ ದಿಕ್ಕು ಬದಲಾಯಿಸಿತ್ತು.

ಗೌಡ್ರು ಸತ್ತು ಹೋಗಿ ಅವರ ಮಗನ ಅಂದಾ ದರ್ಬಾರ್ ಶುರುವಾಗಿತ್ತು. ಕೂತು ತಿಂದರೆ ಕುಡಿಕೆ ಹೊನ್ನು ಸಾಕಾಗುತ್ತಾ. ಗೌಡ್ರು ಗೇಣಿ ಜಮೀನುಗಳು ಉಳಿದವರ– ಅವರವರ ಪಾಲಾಗಿ ಗೌಡ್ರ ಖಜಾನೆ ಖಾಲಿಯಾಗಿತ್ತು. ಮನೆ ಬಿಕೋ ಎನ್ನುತಿತ್ತು.

ನಮ್ಮ ಕಥೆ ಕೇಳ್ತೀರೋ–

ಅಪ್ಪನಿಗೆ ಕಾರು ಬಂದಿತ್ತು. ಅಲ್ಪರಿಗೆ ಐಶ್ವರ್ಯ ಬಂದರೆ ರಾತ್ರೀಲೂ ಕೊಡೆ ಹಿಡಕೊಂಡು ನಡೆದಂತೆ... ಹಣ ಸುಮ್ಮನೆ ಬರಲ್ಲ. ಎಲ್ಲಾ ತರ್ತಾಳೆ ಒಳ್ಳೇದು–ಕೆಟ್ಟದ್ದು.

ಸಣ್ಣತನ–ಧಾರಾಳೀತನ.

ಅಪ್ಪನನ್ನು ಜನ ಅಟ್ಟಕ್ಕೇರಿಸಿದರು. 'ಗ್ರಾಮ ಪಂಚಾಯ್ತಿ ಚುನಾವಣೆಗೆ ನಿಲ್ಲು. ನೀನು ನಾಳೆ ಎಂ.ಎಲ್.ಎ. ಆಗಬಹುದು ಅದು ಇದೂ' – ಅಪ್ಪ ರಾಜಕೀಯ ಎಂಬ ಅಮಲಿಗೆ ಬಿದ್ದ. ನಾನು ಹೈಸ್ಕೂಲ್ ಕೊನೇ ವರ್ಷ ಇದ್ದೆ. ಏನು ಚುನಾವಣೆ. ಎಷ್ಟು ಜನ ಬರೋರು–ಹೋಗೋರು. ಅವರ ಊಟ, ಕಾಫಿ. ತಿಂಡಿ, ಆ ಖರ್ಚು ಈ ಖರ್ಚು...

ಅಪ್ಪ ಗೆದ್ದೇ ಬಿಟ್ಟ. ಗೆಲ್ಲುವುದೊಂದೇ ಅಲ್ಲ ಊರಿನ, ಗ್ರಾಮದ ಛೇರ್ಮನ್ ಆಗಿ ಬಿಟ್ಟ.

ಭಳಿರೇಪರಾಕ್ರಮ ಕಂಠೀರವ...

ಅಪ್ಪನಿಗೆ ಕನಸಿನ ಮೆಟ್ಟಲುಗಳು ಹುಟ್ಟಿಕೊಂಡವು. ಮನೆ ರಿಪೇರಿ ಮಾಡಿಸಿದ. ವೇಷಭೂಷಣಗಳು ಬದಲಾದವು. ತಲೆಗೆ ರುಮಾಲು ಇದ್ದದ್ದು ಬಿಚ್ಚಿ ಹಾಕಿ ಸರಿಯಾಗೆ ಕ್ರಾಪ್ ಮಾಡಿಸಿದ. ಪಂಜೆ ಹೋಗಿ ಪ್ಯಾಂಟು ಹಾಕಿಕೊಂಡ. ಊರಿನವರು ಯಾರೂ ಇಲ್ಲದಿದ್ದಾಗ ನಮ್ಮದೂ ಗೌಡ್ರ ದೊಡ್ಡಮನೆ ದಾಯಾದಿ ಎಂದ.

ಜನನಂಬಿದರು. ನಂಬದವರೂ ಅಪ್ಪನ ಅಧಿಕಾರ, ಎಲ್ಲಾ ನೋಡಿ ನಂಬಿದಂತೆ ನಟಿಸಿದರು. ಮನೆ ಬದಲು ಮಾಡಬಹುದು. ಆದರೆ ಮಡದಿ. ನನ್ನ ಅಮ್ಮ. ಈಗ ಅಮ್ಮ ಹಳತಾಗೆ ಕಂಡಳು. ಮಾತು ಮಾತಿಗೂ ನೀನು 'ಹೂಸು ಬುಡುಕಿ' ಅಂತ ಹೀಯ್ಯಾಳಿಸ ತೊಡಗಿದ. ನನಗೇ ಸಿಟ್ಟು ಬಂದು ಒದೆಯುತ್ತಿತ್ತು. ಅಮ್ಮ ನಿಜವಾಗ್ಲೂ ಅನಕ್ಷರಸ್ಥೆ. ಈಗ ಏನು ಮಾಡಲು ಸಾಧ್ಯ. ಅಪ್ಪನ ತಿಕ್ಕಲುತನಕ್ಕೆ